ನಿಪ್ಪಾಣಿಯನ್ನು ತಾಲ್ಲೂಕೆಂದು ಘೋಷಣೆ ಮಾಡುವುದು

76(220); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ರಾಜ್ಯದಲ್ಲಿ ಹೊಸದಾಗಿ ಘೋಷಣೆಯಾಗಿರುವ ತಾಲ್ಲೂಕುಗಳು ಯಾವುವು;

ಆ) ತಾಲ್ಲೂಕು ಕೇಂದ್ರವೆಂದು ಘೋಷಣೆಯಾಗಿರುವ ನಗರಗಳನ್ನು ಯಾವ ಕಾರಣಕ್ಕೆ ಈವರೆಗೂ ಕಾರ್ಯರೂಪಕ್ಕೆ ತರಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ;

ಇ) ರಾಜ್ಯದ ಗಡಿ ನಗರವಾಗಿರುವ ನಿಪ್ಪಾಣಿ ತಾಲ್ಲೂಕು ಕೇಂದ್ರವಾಗಿ ಘೋಷಣೆಯಾಗಿದ್ದು, ಗಡಿ ಭಾಗದ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದ ಬೇರೆ ತಾಲ್ಲೂಕುಗಳಿಗೆ ಪ್ರತ್ಯೇಕವಾಗಿ ಇರುವಂತಹ ವಿವಿಧ ಇಲಾಖೆಗಳ ಕಛೇರಿಗಳನ್ನು ಹಾಗೂ ಇತರ ಮೂಲ ಸೌಲಭ್ಯಗಳನ್ನು ನಿಪ್ಪಾಣಿಗೂ ಕೊಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಈ) ಭಾವಿ ನಿಪ್ಪಾಣಿ ತಾಲ್ಲೂಕಿನಲ್ಲಿ ಸೇರ್ಪಡೆಗೊಳಿಸಬಹುದಾದ ಗ್ರಾಮಗಳು ಯಾವುವು; ನೆರೆಯ ತಾಲ್ಲೂಕಿನ ಗ್ರಾಮಗಳ ಸೇರ್ಪಡೆಗಾಗಿ ಪ್ರಸ್ತಾವನೆಗಳನ್ನು ಯಾರಾದರೂ ಸಲ್ಲಿಸಿದ್ದಾರೆಯೇ; ಸಲ್ಲಿಸಿದ್ದಲ್ಲಿ ಯಾವ ಯಾವ ಗ್ರಾಮಗಳನ್ನು ಸೇರ್ಪಡಿಸಲಾಗಿದೆ;

ಉ) ಭಾವಿ ನಿಪ್ಪಾಣಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರಬಹುದಾಗಿರುವ ಗ್ರಾಮಗಳು ಯಾವುವು; 2011ನೇ ಜನಗಣತಿಯ ಪ್ರಕಾರ ಸದರಿ ಗ್ರಾಮಗಳಲ್ಲಿರುವ ಪರಿಶಿಷ್ಟ ಜಾತಿ (ಮಹಿಳೆ/ಪುರುಷ)/ಪರಿಶಿಷ್ಟ ಪಂಡಗ (ಮಹಿಳೆ/ಪುರುಷ) ಹಾಗೂ ಇತರ ವರ್ಗಗಳ (ಮಹಿಳೆ/ಪುರುಷ) ಜನಸಂಖ್ಯೆ ಎಷ್ಟು; ಮನೆಗಳ/ಕುಟುಂಬಗಳ ಸಂಖ್ಯೆ ಎಷ್ಟು (ಗ್ರಾಮವಾರು ಮಾಹಿತಿ ನೀಡುವುದು)?

ಶ್ರೀ ವಿ. ಶ್ರೀನಿವಾಸಪ್ರಸಾದ್ (ಕಂದಾಯ ಸಚಿವರು)

ಅ) ರಾಜ್ಯ ಸರ್ಕಾರವು ದಿನಾಂಕ: 08–02–2013ರಂದು ಮಂಡಿಸಿದ 2013–14ನೇ ಆಯವ್ಯಯದಲ್ಲಿ 43 ಹೊಸ ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಿಸಲಾಗಿದ್ದು, ಮಾಹಿತಿ ಈ ಕೆಳಗಿನಂತಿರುತ್ತದೆ

1. ಬಾಗಲಕೋಟೆ ಜಿಲ್ಲೆಯ – ಗುಳೇದಗುಡ್ಡ, ರಬಕವಿ–ಬನಹಟ್ಟಿ ಮತ್ತು ಇಳಕಲ್
2. ಬೆಳಗಾವಿ ಜಿಲ್ಲೆಯ – ನಿಪ್ಪಾಣಿ, ಮೂಡಲಗಿ ಮತ್ತು ಕಾಗವಾಡ
3. ಚಾಮರಾಜನಗರ ಜಿಲ್ಲೆಯ – ಹನೂರು
4. ದಾವಣಗೆರೆ ಜಿಲ್ಲೆಯ – ನ್ಯಾಮತಿ
5. ಬೀದರ್ ಜಿಲ್ಲೆಯ – ಚಿಟಗುಪ್ಪ, ಹಲಸೂರು ಮತ್ತು ಕಮಲಾನಗರ
6. ಬಳ್ಳಾರಿ ಜಿಲ್ಲೆಯ – ಕುರುಗೋಡು, ಕೊಟ್ಟೂರು ಮತ್ತು ಕಂಪ್ಲಿ
7. ಧಾರವಾಡ ಜಿಲ್ಲೆಯ – ಅಣ್ಣಿಗೇರಿ, ಅಳ್ನಾವರ ಮತ್ತು ಹುಬ್ಬಳ್ಳಿ ನಗರ
8. ಗದಗ ಜಿಲ್ಲೆಯ – ಗಜೇಂದ್ರಗಡ ಮತ್ತು ಲಕ್ಷ್ಮೇಶ್ವರ
9. ಕಲಬುರಗಿ ಮತ್ತು ಯಾದಗಿರ್ ಜಿಲ್ಲೆಗಳ – ಕಾಳಗಿ, ಹುಣಸಗಿ, ಕಮಲಾಪುರ, ಯಡ್ರಾವಿ, ಶಹಾಬಾದ್, ವಡಗೆರೆ ಮತ್ತು ಗುರುಮಿಟ್ಕಲ್
10. ಕೊಪ್ಪಳ ಜಿಲ್ಲೆಯ – ಕುಕನೂರು, ಕನಕಗಿರಿ ಮತ್ತು ಕಾರಟಗಿ
11. ರಾಯಚೂರು ಜಿಲ್ಲೆಯ – ಮಸ್ಕಿ ಮತ್ತು ಸಿರವಾರ
12. ಉಡುಪಿ ಜಿಲ್ಲೆಯ – ಬ್ರಹ್ಮಾವರ ಮತ್ತು ಬೈಂದೂರು

13. ದಕ್ಷಿಣ ಕನ್ನಡ ಜಿಲ್ಲೆಯ – ಮೂಡಬಿದರೆ ಮತ್ತು ಕಡಬ

14. ಬೆಂಗಳೂರು ನಗರ ಜಿಲ್ಲೆಯ – ಯಲಹಂಕ

15. ವಿಜಯಪುರ ಜಿಲ್ಲೆಯ – ಬಬಲೇಶ್ವರ, ನಿಡಗುಂದಿ, ತಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಡಚಣ ಮತ್ತು ಕೋಲ್ಹಾರ

ಆ) ಮತ್ತು ಇ) ಈ ಬಗ್ಗೆ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ತಾಲ್ಲೂಕೆಂದು ಅಧಿಸೂಚಿಸಿದ ನಂತರ ಸೇರ್ಪಡೆಗೊಳಿಸಬಹುದಾದ ಗ್ರಾಮಗಳ ಮಾಹಿತಿ ಲಭ್ಯವಾಗುತ್ತದೆ. ಪ್ರಸ್ತುತ ನಿಪ್ಪಾಣಿ ವಿಧಾನ ಸಭಾ ಮತ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳನ್ನು ನಿಪ್ಪಾಣಿಗೆ ಸೇರ್ಪಡೆ ಮಾಡುವಂತೆ ಪ್ರಸ್ತಾವನೆಯು ಸ್ವೀಕೃತವಾಗಿರುತ್ತದೆ ಹಾಗೂ ನಿಪ್ಪಾಣಿಯು ತಾಲ್ಲೂಕು ಎಂದು ಅಧಿಸೂಚನೆ ಹೊರಡಿಸಿದ ನಂತರ ಸೇರ್ಪಡೆ ಮಾಡಲಾದ ಗ್ರಾಮಗಳ ಮಾಹಿತಿಯು ಲಭ್ಯವಾಗುತ್ತದೆ.

ಉ) ತಾಲ್ಲೂಕು ರಚನೆ ಮಾಡಿದ ನಂತರ ಮಾಹಿತಿ ಲಭ್ಯವಾಗುತ್ತದೆ.

ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪಿಸುವುದು

77(221); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ರಾಜ್ಯದ ಗಡಿ ಜಿಲ್ಲೆಯಾಗಿರುವ ಬೆಳಗಾವಿಯಲ್ಲಿ ಕೆ.ಎ.ಟಿ.(ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ) ಸ್ಥಾಪಿಸುವಲ್ಲಿ ರಾಜ್ಯ ಸರ್ಕಾರದ ನಿಲುವು ಏನು;

ಆ) ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪನೆ ಮಾಡಲು ಈಗಾಗಲೇ ಸರ್ಕಾರವು ಒಪ್ಪಿಕೊಂಡಿದೆಯೇ; ಹಾಗಿದ್ದಲ್ಲಿ, ಈವರೆಗೆ ಆರಂಭಿಸದಿರಲು ಕಾರಣವೇನು;